**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.1159/2018**

ಪಿರ್ಯಾದುದಾರರು:– ನಂದಗುಡಿ ಪೊಲೀಸರು, ಹೊಸಕೋಟೆ

**ವಿರುದ್ಧ**

ಆರೋಪಿ:– ಹರಿನಾಥ ಬಿ. ಬಿನ್ ಭತ್ಯಣ್ಣ, 42 ವರ್ಷ
ವಾಸ: ನಂ.:12–18, ಕರುವಪಳ್ಳಿ, ಟಿ. ಸಕಿ ಬಂಡ,
ಚಿನ್ನಮಂಡಂ, ವೈಎಸ್‌ಆರ್, ಕಡಪ ಜಿಲ್ಲೆ,
ಆಂಧ್ರಪ್ರದೇಶ ರಾಜ್ಯ.

## ಆರೋಪಣೆ

ಶ್ರೀ ಗಿರೀಶ ಆರ್.ಬಿ., ಬಿ.ಎ.ಎಲ್., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು, ಆರೋಪಿಯಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:

ದಿ: 17.04.2018 ರಂದು ಬೆಳಿಗ್ಗೆ 2.45 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಹೊಸಕೋಟೆ ತಾಲ್ಲೂಕು, ನಂದಗುಡಿ ಪೊಲೀಸ್ ಠಾಣಾ ಸರಹದ್ದು, ಹೊಸಕೋಟೆ–ಚಿಂತಾಮಣಿ ರಸ್ತೆ, ಹಿಂಡಿಗನಾಳದ ಬಳಿ ಆರೋಪಿಯಾದ ನೀವು ಎಪಿ–03–ಟಿಸಿ–1548 ಬೊಲೇರೋ ಪಿಕಪ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರಿಗೆ ಬರುತ್ತಿದ್ದ ಕೆಎ–53–ಎಂಬಿ–623 ಕಾರಿಗೆ ಡಿಕ್ಕಿ ಹೊಡೆಸಿದ್ದರ ಪರಿಣಾಮ ಕಾರು ಜಖಂಗೊಂಡಿರುತ್ತದೆ, ಕಾರನ್ನು ಚಾಲನೆ ಮಾಡುತ್ತಿದ್ದ ಈಶ್ವರಪ್ಪರವರಿಗೆ ತಲೆಗೆ ಮತ್ತು ಮೈಕೈಗಳಿಗೆ ಏಟು ಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಚಾ.ಸಾ.2ರವರಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿರುತ್ತವೆ ಎಂದು ಆರೋಪಿಸಲಾಗಿದೆ.

ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ.279, 338, 304[ಎ]ರ ರೀತ್ಯ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪವನ್ನು ನೀವು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿದ್ದು ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸಕೋಟೆ**

**ಸಿ. ಸಿ. ನಂ.1159/2018**

ಪಿರ್ಯಾದುದಾರರು:– ನಂದಗುಡಿ ಪೊಲೀಸರು, ಹೊಸಕೋಟೆ

**ವಿರುದ್ಧ**

ಆರೋಪಿ:– ಹರಿನಾಥ ಬಿ. ಬಿನ್ ಭತ್ಯಣ್ಣ, 42 ವರ್ಷ
ವಾಸ: ನಂ.:12–18, ಕರುವಪಳ್ಳಿ, ಟಿ. ಸಕಿ ಬಂಡ,
ಚಿನ್ನಮಂಡಂ, ವೈಎಸ್‌ಆರ್, ಕಡಪ ಜಿಲ್ಲೆ,
ಆಂಧ್ರಪ್ರದೇಶ ರಾಜ್ಯ.

**ಆರೋಪಣೆ**

ಪ್ರಶ್ನೆ 1: ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿನಗೆ ಅರ್ಥವಾಯಿತೆ?

ಉತ್ತರ:

ಪ್ರಶ್ನೆ 2: ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ:

ಮೇಲ್ಕಂಡ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 23.12.2021 ರಂದು ಧೃಢೀಕರಿಸಿದ್ದೇನೆ.

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಹೊಸಕೋಟೆ.**